ಭೀಮಸೇನರಾವ್ ಪೊಲೀಸ್ ಇಲಾಖೆಯಲ್ಲಿ ಕೆಲಸಮಾಡುತ್ತಿದ್ದರೆಂದು ಕೇಳಿದ್ದೇನೆ. ಸಾಹಿತ್ಯದಲ್ಲಿ ಅವರು ಪ್ರಸಿದ್ಧರಾದದ್ದು ಬೀಚಿ ಎಂಬ ಕಾವ್ಯನಾಮದಿಂದ. ಅವರು 'ಬೀ' ಅಕ್ಷರದ ನಂತರ 'ಚಿ' ಗೆ ಬದಲಾಗಿ 'ಸಿಎಚ್‌ಐ' ಎಂಬ ಇಂಗ್ಲಿಷ್ ಅಕ್ಷರಗಳನ್ನು ಸೇರಿಸಿಕೊಂಡದಕ್ಕೆ ಅವರ ತುಂಟತನವಷ್ಟೇ ಕಾರಣವಾಗಿರಲಾರದು.

ನನಗೆ ಸಾಕಷ್ಟು ಪರಿಚಯವಿದ್ದ ತಮಿಳಿನ ಇಬ್ಬರು ಲೇಖಕರು ತಾವಿಟ್ಟುಕೊಂಡ 'ಸ್ತ್ರೀನಾಮ'ಗಳಿಂದಲೇ ಹೆಸರಾಗಿದ್ದರು. ಒಬ್ಬರು 'ಸುಜಾತ'; ಅವರ ನಿಜ ನಾಮಧೇಯ ರಂಗನ್ ಎಂದಿರಬೇಕು. ಇನ್ನೊಬ್ಬರು ಇಂದಿರಾ ಪಾರ್ಥಸಾರಥಿ. ತೆಲುಗಿನ ಕೆಲವು ಕತೆ, ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ 'ಮಿಸ್ ಸಂಪತ್' ಅವರ ಮೂಲನಾಮ ರುಕ್ಮಾಯಿ.

ಇಷ್ಟು ಜನರಲ್ಲಿ ನಮ್ಮ ಬೇಂದ್ರೆಯವರನ್ನು ಬಿಟ್ಟರೆ ಬೇರೆ ಯಾರಿಗೂ ಒಂದಕ್ಕಿಂತ ಹೆಚ್ಚು ಕಾವ್ಯನಾಮಗಳು ಬೇಕಾಗಲಿಲ್ಲ. ಆದರೆ ಪೋರ್ಚುಗಲ್ಲಿನಲ್ಲಿದ್ದ ಒಬ್ಬ ಶ್ರೇಷ್ಠ ಕವಿಗೆ ತನ್ನ ಬರಹಗಳನ್ನು 'ಬರೆದವನು' ನಾನು ನೀನೊ ನೀ ನಾನೊ ಏನೊ ಎಂದು ದಿಗ್ಭ್ರಮೆಯಾಗುವಷ್ಟು ಕಾವ್ಯನಾಮಗಳಿದ್ದವು. ಅವನ ಹೆಸರು ಫರ್ನಾಂದೊ ಪೆಸೋಅ (1888–1935).


ನಿರಂಜನ

ಪೆಸೋಅನಿಗೆ ಐದು ವರ್ಷ ತುಂಬಿದ್ದೇ ಅವನ ತಂದೆ ಸತ್ತ; ತಾಯಿ ಮತ್ತೊಬ್ಬನನ್ನು ಮದುವೆಯಾದಳು. ಮದುವೆಯಾದವನು ದಕ್ಷಿಣ ಆಫ್ರಿಕದ ಡರ್ಬಾನ್‌ನಲ್ಲಿ ಪೋರ್ಚುಗೀಸ್ ಕಾನ್ಸಲ್ ಆಗಿದ್ದವನು. ಆದ್ದರಿಂದ ಪೆಸೋವ ಡರ್ಬಾನ್ ನಗರದಲ್ಲಿ ಒಂದು ಇಂಗ್ಲಿಷ್ ಶಾಲೆ ಸೇರಿದ; ಹದಿನೇಳು ವರ್ಷವಾಗುವವರೆಗೂ ಅಲ್ಲಿಯೇ ಇದ್ದ. ಪೋರ್ಚುಗಲ್ಲಿಗೆ ಹಿಂತಿರುಗಿದ ಮೇಲೆ ಒಂದು ವರ್ಷ ಮಾತ್ರ ಲಿಸ್ಬನ್ ವಿಶ್ವವಿದ್ಯಾಲಯದಲ್ಲಿ ಸಾಹಿತ್ಯದ ವಿದ್ಯಾರ್ಥಿಯಾದ. ಆಮೇಲೆ ವಾಣಿಜ್ಯ ವಿಷಯಗಳ ಭಾಷಾಂತರಕಾರನಾಗಿ ಕಡುಬಡತನದಲ್ಲಿ ಬದುಕಿದರೂ ಬರೆಯುತ್ತಲೇ ಇದ್ದ. ಅವನು ಬದುಕಿದ್ದಾಗ ಪ್ರಕಟವಾದದ್ದು ಅತ್ಯಲ್ಪ.

1935ರ ನವೆಂಬರ್ 30ರಂದು ಪೆಸೋಅ ನಿಧನನಾದಾಗ ಅವನದೇ 27,540 ಹಸ್ತಪ್ರತಿಗಳಿದ್ದ ಒಂದು ಬಹು ಭಾರಿ ಟ್ರಂಕು ಪತ್ತೆಯಾಯಿತು. ಆ ಹಸ್ತಪ್ರತಿಗಳು ಮುಂದೆ ಕೆಲವು ಕವನ ಸಂಕಲನಗಳಾದದ್ದಷ್ಟೇ ಅಲ್ಲ, ಬರವಣಿಗೆಯ ಬಗ್ಗೆ, ಮಾನವ ಅಸ್ತಿತ್ವದ ಬಗ್ಗೆ ಅನನ್ಯ ಚಿಂತನೆಯಿರುವ ಒಂದು ಗ್ರಂಥವಾಗಿಯೂ ಹೊರಬಂದವು. ಇಂಗ್ಲಿಷಿಗೆ ಅನುವಾದವಾಗಿರುವ ಆ ಗ್ರಂಥದ ಹೆಸರು 'ಬುಕ್ ಆಫ್ ಡಿಸ್‌ಕ್ವೈಟ್'.

ಫರ್ನಾಂದೊ ಪೆಸೋಅ ತನ್ನ ಬರಹಗಳಿಗಾಗಿ ಬೇರೆ ಬೇರೆ ಕಾವ್ಯನಾಮಗಳನ್ನು (ಹೆಟರೋನಿಮ್ಸ್) ಸೃಷ್ಟಿಸಿದವನು; ಆ ಕಾವ್ಯನಾಮಗಳ ವಾರಸುದಾರರು ಯಾರು ಯಾರೆಂದು ಕಲ್ಪಿಸಿಕೊಂಡು ಅವರಲ್ಲಿ ಒಬ್ಬೊಬ್ಬನಿಗೂ ಅವನದೇ ಆದ ವ್ಯಕ್ತಿತ್ವವನ್ನೂ ಜೀವನಚರಿತ್ರೆಯನ್ನೂ ಬರವಣಿಗೆಯ ಶೈಲಿಯನ್ನೂ ನೀಡಿದವನು. ಅವರಲ್ಲಿ ಮೂವರು ಬೇರೆ ಬೇರೆ ವ್ಯಕ್ತಿಗಳು ಮೂರು ವಿಶಿಷ್ಟ ಬಗೆಯ ಕವಿತೆಗಳನ್ನು